ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಹಾಸನದಲ್ಲಿ ಮಾತನಾಡುವಾಗ ನಮ್ಮ ಸಮ್ಮಿಶ್ರ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಸೇರಿಸಿದ್ದೇವೆ. ಅದನ್ನು ಮುಂದಿನ ಬಜೆಟ್‌ನಲ್ಲಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಮಾನ್ಯ ಮಾಧುಸ್ವಾಮಿಯವರು ನೀವು ಒಂದು ಕಡೆ ಈ ರೀತಿ ಹೇಳುತ್ತಿದ್ದೀರಿ, ಇನ್ನೊಂದು ಕಡೆ ಜಪ್ತಿ ಮಾಡಲು ಮಾಡುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಆ ರೀತಿ ಇದ್ದ ಆದೇಶವನ್ನು ವಾಪಸ್ ತೆಗೆದುಕೊಂಡಿರುವುದು ನಿಜ. ಆದರೆ ನಾವು ಅಧಿಕಾರಿಗಳಿಗೆ ಯಾರು ಸಾಲ ಮರುಪಾವತಿ ಮಾಡುತ್ತಾರೆ ಅವರ ಹತ್ತಿರ ವಸೂಲಿ ಮಾಡಬೇಕು, ಆದರೆ ಬಲಾತ್ಕಾರ ಮಾಡಿ ಯಾವುದನ್ನೂ ವಸೂಲಿ ಮಾಡಬಾರದು, ಅವರ ಚರ ಮತ್ತು ಸ್ಥಿರಾಸ್ತಿಗಳನ್ನು ಜಪ್ತಿ ಮಾಡಬಾರದು ಎಂದು ಸ್ಪಷ್ಟವಾದ ಸೂಚನೆ, ನಿರ್ದೇಶನವನ್ನು ಕೊಟ್ಟಿದ್ದೇವೆ. ಒಂದು ವೇಳೆ ವಸೂಲಿ ಮಾಡುವಾಗ ಬಲಾತ್ಕಾರ ಮಾಡಿದ್ದ ಉದಾಹರಣೆಗಳು ಇದ್ದರೆ ಅದನ್ನು ಕಳುಹಿಸಿಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲಾ. ಚಿಕ್ಕನಾಯಕನಹಳ್ಳಿಯಲ್ಲಿ ಸೋಮವಾರ ಹರಾಜು ಮಾಡಿದ್ದಾರೆ. ತಾವು ಅದನ್ನು ಗಮನಿಸಬೇಕು.

ಶ್ರೀ ಸಿದ್ಧರಾಮಯ್ಯ : ಅದರ ಬಗ್ಗೆ ಸ್ಪಷ್ಟವಾಗಿ ಆ ರೀತಿ ಮಾಡಬಾರದು ಎಂದು ಎಲ್ಲಾ ಅಧಿಕಾರಿಗಳಿಗೆ ಮತ್ತೊಮ್ಮೆ ಸೂಚನೆ ಕಳುಹಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಕಲಘಟಗಿ ತಾಲ್ಲೂಕಿನಲ್ಲೂ ಹರಾಜು ಹಾಕುತ್ತಿದ್ದಾರೆ. ತಮಗೆ ಹಲವಾರು ಉದಾಹರಣೆಗಳನ್ನು ಕಳಿಸಿಕೊಡುತ್ತೇವೆ. ಈ ರೀತಿ ಬಹಳ ಕಡೆ ಆಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪಿಎಲ್‌ಡಿ ಬ್ಯಾಂಕುಗಳಲ್ಲಿ ಆಗುತ್ತಿದೆ, ಸೊಸೈಟಿಗಳಲ್ಲಿ ಆಗುತ್ತಿದೆ, ಎಲ್ಲರೂ ಹಾಕುತ್ತಿದ್ದರೆ, ಡಿಸಿಸಿ ಬ್ಯಾಂಕಿನವರು ಹಾಕುತ್ತಿದ್ದಾರೆ, ಅದನ್ನು ದಯಮಾಡಿ ನಿಲ್ಲಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಕಲಘಟಗಿ ತಾಲ್ಲೂಕಿನಲ್ಲಾಗಿದೆ, ಧಾರವಾಡ ತಾಲ್ಲೂಕಿನಲ್ಲಾಗಿದೆ, ಬೇಕಾದರೆ ತಮಗೆ ಅದರ ಪ್ರತಿಯನ್ನು ಕಳಿಸಿಕೊಡುತ್ತೇವೆ.

ಶ್ರೀ ಸಿದ್ಧರಾಮಯ್ಯ : ಅದನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

(ಇ) ಹಾನಗಲ್ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾಡಾನೆಗಳ ಹಾವಳಿಯಿಂದ ಆಗಿರುವ ಅನಾಹುತದ ಬಗ್ಗೆ

ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಅರಣ್ಯ ಸಚಿವರ ಗಮನಕ್ಕೆ ತರಬಯಸುತ್ತಿದ್ದೇನೆ. ಹಾನಗಲ್ ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿಯಿಂದ ಹಿರೇಕವಚಿ ಗ್ರಾಮದಲ್ಲಿ ಒಬ್ಬ ಮೃತಪಟ್ಟಿದ್ದು ಮತ್ತೊಬ್ಬ ಗಾಯಗೊಂಡಿದ್ದಾನೆ. ಇದಲ್ಲದೆ ಪದೇ ಪದೆ ರೈತರ ಜಮೀನುಗಳಲ್ಲಿ 18 ಆನೆಗಳ ಹಾವಳಿಯಿಂದ ಅಲ್ಲಿ ಸಾಕಷ್ಟು ಆಸ್ತಿಪಾಸ್ತಿ ಹಾನಿಗೆ ಒಳಗಾಗಿದೆ, ಜೀವಭಯ ಉಂಟಾಗಿದೆ, ಬೆದರಿಕೆ ಇರುವುದರಿಂದ ಸರ್ಕಾರ ತಕ್ಷಣ ಅದಕ್ಕೆ ಕ್ರಮ ತೆಗೆದುಕೊಂಡು ಆನೆಗಳನ್ನು ಹಿಡಿಯುವಂಥ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ಆನೆ ಹಾವಳಿ ಬಗ್ಗೆ ನಿನ್ನೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೇಳಿದ್ದೆ. ನಮ್ಮ ಜಿಲ್ಲೆಯಿಂದಲೆ ಆನೆ ಹಾವಳಿಗಳಿಗೆ ಹೋಗಿರುವುದು. ನಾನು ಅರಣ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನಮ್ಮಲ್ಲಿ ದಾಂಡೇಲಿ ಅಭಯಾರಣ್ಯ ಇದೆ, ನನ್ನ ಹತ್ತಿರ ಆನೆಗಳು ಹೇಗೆ ರೈತರ ಬೆಳೆಗಳನ್ನು ಹಾಳು ಮಾಡುತ್ತಿದೆ ಎಂಬ ಬಗ್ಗೆ ಫೋಟೋಗಳು ಇವೆ. ಮನೆಯ ಹತ್ತಿರ ಹತ್ತಿರ ಬಂದು ತೊಂದರೆ ಕೊಡುತ್ತಿದೆ, ಅಡಿಕೆ ತೋಟ, ಭತ್ತದ ಗದ್ದೆ ಹಾಳಾಗುತ್ತಿದೆ, ಬಾಳೆ ಗಿಡಗಳನ್ನು ನಾಶ ಮಾಡುತ್ತಿದೆ, ಆನೆಗಳಿಗೆ ಇವತ್ತು ಕಾಡಿನಲ್ಲಿ ಅದಕ್ಕೆ ಬೇಕಾಗಿರುವಂಥ ಬಿದಿರು, ಆಹಾರಪದಾರ್ಥಗಳು, ಕುಡಿಯುವ ನೀರಿನ ವ್ಯವಸ್ಥೆ ಆಗುತ್ತಿಲ್ಲ. ಇದ್ದ ಕಾಡನ್ನೆಲ್ಲಾ ನಾಶ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆ 90 ಭಾಗ ಅರಣ್ಯ ಜಿಲ್ಲೆ. ಆದರೆ ಇವತ್ತು ಅಷ್ಟು ಪ್ರಮಾಣದಲ್ಲಿ ಕಾಡು ಉಳಿದಿಲ್ಲ, ಅಕ್ರಮ ಗಣಿಗಾರಿಕೆ, ಕಳ್ಳತನದಿಂದ ವ್ಯಾಪಕವಾಗಿ ಅರಣ್ಯ ನಾಶವಾಗುತ್ತಿದೆ. ಅರಣ್ಯ ಇಲಾಖೆ ನಮ್ಮ ಜಿಲ್ಲೆಯಲ್ಲಿ ಅರಣ್ಯ ರಕ್ಷಣೆ ಮಾಡದೆ ಸಂಪೂರ್ಣವಾಗಿ ವಿಫಲವಾಗಿದೆ. ಅದರ ಜೊತೆಗೆ ನನ್ನ ಅಂಕೋಲ ತಾಲ್ಲೂಕಿನಲ್ಲಿ ಕಳೆದ ಎರಡು ವರ್ಷದಲ್ಲಿ ಹುಲಿ ಸುಮಾರು ನೂರು ಹಸುಗಳನ್ನು ತಿಂದಿದೆ, ಅದಕ್ಕೆ ಪರಿಹಾರ ಬಿಡುಗಡೆ ಮಾಡುವುದಿಲ್ಲ, ಕೊಡುವುದಿಲ್ಲ, ಹಳ್ಳಿಗೆ ಬಂದು ದೊಡ್ಡ ಅನಾಹುತ ಮಾಡುತ್ತಿದೆ, ಆನೆ ಒಂದು ಕಡೆ, ಹುಲಿ ಮತ್ತೊಂದು ಕಡೆ, ಹಳಿಯಾಳ ತಾಲ್ಲೂಕು, ಜೋಯಿಡಾ ತಾಲ್ಲೂಕು ಮತ್ತು ಯಲ್ಲಾಪುರ, ಸಿರಸಿ, ಮುಂಡಗೋಡು, ನಮ್ಮ ತಾಲ್ಲೂಕಿನಿಂದ ಹಾವೇರಿ ಜಿಲ್ಲೆಯ ಹಾನಗಲ್‌ಗೆ ಹೋಗಿದೆ. ಆನೆಗಳು ಇಲ್ಲಿಂದಲೇ ಅಲ್ಲಿಗೆ ಹೋಗುವುದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆ ನಾಶವಾಗುತ್ತದೆ, ಕೋಟ್ಯಾಂತರ ರೂಪಾಯಿ ಬೆಳೆ ನಾಶ ಮಾಡುತ್ತದೆ, ರಸ್ತೆ ಕೆಲಸಕ್ಕೆ ಬಂದವರು ಮೊನ್ನೆ ರಾತ್ರಿ ಟೆಂಟ್ ಹಾಕಿಕೊಂಡು ಮಲಗಿಕೊಂಡಿದ್ದರು, ಆನೆ ಬಂದು ಟೆಂಟ್‌ನ್ನು ಕಿತ್ತು ಹಾಕಿ ಅವರುಗಳ ಮೇಲೆ ಧಾಳಿ ಮಾಡಿ ಆ ಮೂರು ಜನರು ಆಸ್ಪತ್ರೆ ಸೇರಿದ್ದಾರೆ. ಈ ಇಲಾಖೆಯವರು ಐದು ರೂಪಾಯಿ ಪರಿಹಾರ ಕೊಡುವುದಿಲ್ಲ, ಅವರನ್ನು ಹೋಗಿ ಮಾತನಾಡಿಸುವುದಿಲ್ಲ, ಆನೆಯನ್ನು ಓಡಿಸಿ ಎಂದರೆ ಬೆಂಗಳೂರಿನಿಂದ ಅನುಮತಿ ಬೇಕೆಂದು ಹೇಳುತ್ತಾರೆ, ಮಾನ್ಯ ಅರಣ್ಯ ಸಚಿವರಲ್ಲಿ ನಾನು ವಿನಂತಿಸುತ್ತೇನೆ, ನಿಮ್ಮ ಪಿ.ಸಿ.ಸಿ.ಎಫ್ ನ ಮೂಲಕ ನಮ್ಮಲ್ಲಿರುವ ಕನ್‌ಸರ್ವೇಟರ್‌ಗಳಿಗೆ, ಡಿ.ಎಫ್.ಓ. ಮತ್ತು ಆರ್.ಎಫ್.ಓಗಳಿಗೆ ಆನೆ ಓಡಿಸಿ ಎಂದರೆ ಬೆಂಗಳೂರಿನಿಂದ ಅನುಮತಿ ಬೇಕು ಎಂದು ಹೇಳುತ್ತಾರೆ, ಬೆಂಗಳೂರಿನಿಂದ ಏನೋ ಬಂದೂಕು ಬೇಕಂತೆ, ಬೆಂಗಳೂರಿನಿಂದ ಬಂದೂಕಿಗೆ ಹಾಕುವ ಸ್ಪೆಶಲ್ ಕಾಡುತೋಸು ಏನೋ ಬೇಕಂತೆ. ಕನ್‌ಸರ್ವೇಟರ್‌ರವರಿಂದ ಅನುಮತಿ ಬೇಕಂತೆ. ಅಲ್ಲಿ ಆನೆ ಬಂದು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಾವಳಿ ಮಾಡುತ್ತಿದ್ದರೂ ಇಲ್ಲಿ ಸರ್ಕಾರಕ್ಕೂ ಯಾರಿಗೂ ಗೊತ್ತಾಗುವುದಿಲ್ಲ, ಎಲ್ಲರೂ ಅವರವರ ಲೋಕದಲ್ಲಿದ್ದಾರೆ. ಆದರೆ ನಮ್ಮ ಹಳ್ಳಿಯಲ್ಲಿ ಜನರು ಭಯಭೀತರಾಗಿದ್ದಾರೆ, ಯಾರೂ ರಕ್ಷಣೆಗೆ ಬರುತ್ತಿಲ್ಲ. ಆನೆಗಳನ್ನು ಅರಣ್ಯಕ್ಕೆ ಓಡಿಸುತ್ತಿಲ್ಲವೆಂದು ನಮ್ಮ ಜಿಲ್ಲೆಯಲ್ಲಿ ನಮ್ಮ ಕತೆ ಅರಣ್ಯ ರೋಧನವಾಗಿದೆ. ತಕ್ಷಣ ಆನೆಗಳನ್ನು ಕಾಡಿಗೆ ವಾಪಸ್ಸು ಕಳುಹಿಸಬೇಕು, ಹಳ್ಳಿಗಳಿಗೆ ಅದು ಬಾರದಂತೆ ಕ್ರಮ ತೆಗೆದುಕೊಳ್ಳಬೇಕು, ಅಲ್ಲಿ ಆಹಾರ, ನೀರು ಕೊಡುವ ಬೇರೆ ಬೇರೆ ಕ್ರಮ ತೆಗೆದುಕೊಳ್ಳಬೇಕು. ಎರಡನೆಯದಾಗಿ ತಕ್ಷಣ ಪರಿಹಾರ ಕೊಡಬೇಕು, ಇಡೀ ಭತ್ತದ ಗೊಣಬೆಯನ್ನೇ ಹಾಳು ಮಾಡಿಬಿಟ್ಟಿದೆ. ಒಬ್ಬ ರೈತರಿಗೆ ಒಂದೆರಡು ಗೊಣಬೆ ಇದ್ದರೆ ಅದು ಹಾಳಾದರೆ ಅವನು ಜೀವನ ಹೇಗೆ ಮಾಡಬೇಕು. ಈ ವರ್ಷ ಸರಿಯಾಗಿ ಮಳೆ ಆಗಲಿಲ್ಲ,

ಬರಗಾಲದ ಪರಿಸ್ಥಿತಿ ಇದೆ, ಇದ್ದ ಭತ್ತವನ್ನೂ ಪೂರ್ಣವಾಗಿ ಹಾಳುಮಾಡಿಬಿಟ್ಟಿದೆ, ಆದುದರಿಂದ ತಕ್ಷಣ ಅವರಿಗೆ ಪರಿಹಾರ ಕೊಡಬೇಕು. ಈ ಕ್ರಮಕ್ಕೆ ಸೂಕ್ತ ರಕ್ಷಣೆ ಕೊಡಲು ಬೇಕಾಗಿರುವಂಥ ತಕ್ಷಣದ ಕ್ರಮಗಳು ಅರಣ್ಯ ಇಲಾಖೆಯಿಂದ ಆಗಬೇಕು, ಇದು ಅರಣ್ಯ ರೋದನವಾಗಬಾರದು, ಮಾನ್ಯ ಅರಣ್ಯ ಮಂತ್ರಿಗಳು ಇದರ ಬಗ್ಗೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಹಾಗೂ ಪರಿಸರ ಖಾತೆ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ನಿಜ, ಸನ್ಮಾನ್ಯ ಶಾಸಕರು ಹೇಳಿದಂತೆ ಕೆಲವು ಕಡೆ ಆನೆಗಳು ಬಂದಿವೆ. 15 ಆನೆಗಳು ಬಂದು, ಅದರಲ್ಲಿ 5-6 ಆನೆಗಳು ತುಳಿದು ಹಾಳು ಮಾಡಿ, ಅಲ್ಲಿ ಸ್ವಲ್ಪ ಲುಕ್ಸಾನು ಆಗಿದೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಅದರ ಬಗ್ಗೆ ನಾನು ಸರ್ವೆ ಮಾಡಿಸಿದ್ದೇನೆ. ಅಂದಾಜು 5-6 ಲಕ್ಷ ರೂಪಾಯಿಗಳ ಲುಕ್ಸಾನು ಆಗಿದೆ ಎಂದು ತಿಳಿದು ಬಂದಿದೆ. ನಾವೊಂದು ಯೋಜನೆಯನ್ನು ಮಾಡುತ್ತಿದ್ದೇವೆ. ಅದರ ಪ್ರಕಾರ ಆನೆಗಳನ್ನು ದೊಡ್ಡ ಕಾಡು ಅಥವಾ ಅಭಯಾರಣ್ಯದಲ್ಲಿ ಬಿಡುವುದಕ್ಕೆ ಏನೆಲ್ಲಾ ಬೇಕೋ ಅದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಪಟಾಕಿ ಹಚ್ಚುವುದು ಅಥವಾ ಇನ್ನಿತರ ಮಾರ್ಗದ ಮೂಲಕ ಆನೆಗಳನ್ನು ಪಾಪಸ್ ಅರಣ್ಯಕ್ಕೆ ಓಡಿಸುವ ವ್ಯವಸ್ಥೆ ಮಾಡುತ್ತೇವೆ. ಒಂದೇ ಒಂದು ಹುಲಿ ಮಾತ್ರ ಬಂದಿತ್ತು ಎಂದು ತಿಳಿದು ಬಂದಿದೆ. ಅದರಿಂದ ಯಾರಿಗೇನೂ ಲುಕ್ಸಾನು ಆಗಿಲ್ಲ. ಯಾರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೋ ಅವರಿಗೆ ಚಿಕಿತ್ಸೆಗಾಗಿ ಸ್ವಲ್ಪ ಹಣವನ್ನು ಕೊಟ್ಟಿದ್ದೇವೆ. ಯಾರಿಗೆ ಲುಕ್ಸಾನು ಆಗಿದೆಯೋ ಅವರಿಗೆ ಸ್ವಲ್ಪ ಪರಿಹಾರವನ್ನೂ ಕೂಡ ಕೊಟ್ಟಿದ್ದೇವೆ. ಒಟ್ಟಾರೆಯಾಗಿ ಅಂತಾದ್ದೇನೂ ಲುಕ್ಸಾನು ಆಗಿಲ್ಲ. ಎಲ್ಲಾ ಕಡೆಗಳಿಂದಲೂ ಆನೆಗಳ ಹಾವಳಿ ಬಗ್ಗೆ ದೂರು ಬರುತ್ತಿವೆ. ಆದಷ್ಟು ಬೇಗನೆ ಅವುಗಳ ಹಾವಳಿಯನ್ನು ತಡೆಗಟ್ಟಿ ವ್ಯವಸ್ಥೆ ಸರಿಪಡಿಸುತ್ತೇನೆ. ಅವುಗಳು ಅರಣ್ಯದಿಂದ ನಾಡಿಗೆ ಏಕೆ ಬರುತ್ತಿವೆ ಎಂದರೆ, ಕಾಡಿನ ಅಂಚಿನಲ್ಲಿ ಕೆಲವರು ಒತ್ತುವರಿ ಮಾಡಿಕೊಂಡು sugarcane, ಬಾಳೆಹಣ್ಣು ಮತ್ತು ಭತ್ತವನ್ನು ಬೆಳೆಯುತ್ತಿದ್ದಾರೆ. ಇದು ಮಣೆ ಹಾಕಿ, ಇಲ್ಲಿ ಬಂದು ಕುಳಿತುಕೋ ಎಂದು ಅವುಗಳಿಗೆ ಹೇಳುವಂತಹ ಪರಿಸ್ಥಿತಿ ಉಂಟಾಗಿದೆ. ಕಾಡು ಒತ್ತುವರಿ ಮಾಡಿ ಬೆಳೆಗಳನ್ನು ಬೆಳೆಯುವಂತಾದ್ದು ಆಗಬಾರದು. ಆ ರೀತಿ ಆಗದಿರುವುದರಿಂದ, ಆನೆಗಳಿಗೆ 'ಮರಾಯಾ, ನೀನೇ ಮನೆಗೆ ಬಂದು ಕೂರಪ್ಪ' ಎಂದು ಆಹ್ವಾನ ನೀಡಿರುವಂತಹ ಪರಿಸ್ಥಿತಿ ಉಂಟಾಗಿದೆ. ಅದನ್ನು ನಾವು ತಡೆಗಟ್ಟಬೇಕಾಗಿದೆ. ಆದಷ್ಟು ಮಟ್ಟಿಗೆ ಆನೆಗಳಿಂದ ತೊಂದರೆಯಾಗದಂತೆ ನೋಡಿಕೊಳ್ಳುವಂತಹ ಜವಾಬ್ದಾರಿ ನಮ್ಮದಾಗಿದೆ. ನಾನು ಅದರ ಬಗ್ಗೆ ತಕ್ಕ ವ್ಯವಸ್ಥೆಯನ್ನು ಮಾಡಿಸುತ್ತೇನೆ ಎಂದು ಸನ್ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಸಚಿವರು ಮೃತರ ಕುಟುಂಬದವರಿಗೆ ಪರಹಾರ ಕೊಡುವುದರ ಬಗ್ಗೆ ಏನನ್ನೂ ಹೇಳಲೇ ಇಲ್ಲ. ನಮ್ಮಲ್ಲಿ ಒಬ್ಬರು ಸತ್ತಿದ್ದಾರೆ, ಮತ್ತೊಬ್ಬರು ಗಾಯಗೊಂಡಿದ್ದಾರೆ. 18 ಆನೆಗಳ ಜೊತೆಗೆ ಒಂದು ಹುಲಿ ಸಹಿತ ನಮ್ಮಲ್ಲಿ ಬಂದು ಹೋಗಿದೆ. ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಲಿಲ್ಲ. ಅದರ ಬಗ್ಗೆ ನಾನು ಮೊದಲೇ ಮಾನ್ಯ ಸಚಿವರನ್ನು ಕೇಳಿದ್ದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಒಬ್ಬರು ಸತ್ತಿರುವುದು ನಿಜ. ರಾತ್ರಿ ಹೊತ್ತು ನಾಲ್ಕು ಘಂಟೆಗೆ ಆನೆಯೊಂದು ವ್ಯಕ್ತಿಯೊಬ್ಬರನ್ನು ತುಳಿದಿದೆ, ಅದರಿಂದ ಆತ ಸತ್ತಿದ್ದಾನೆ. ಅದಕ್ಕೆ ಪರಿಹಾರವಾಗಿ ಅವರ ಕುಟುಂಬದವರಿಗೆ already 20 ಸಾವಿರ ರೂಪಾಯಿಗಳನ್ನು ಕೊಡಲಾಗಿದೆ. Saturday ಒಳಗಾಗಿ ಇನ್ನುಳಿದ 80 ಸಾವಿರ ರೂಪಾಯಿಗಳನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.